ತಾವೇನಾದರೂ ಯಾವುದಾದರೂ ಹಳ್ಳಿಗಳಿಗೆ ಹೋಗಿ ನಿರ್ಮಾಣವಾದ ಶೌಚಾಲಯಗಳನ್ನು ನೋಡಿದ್ದೀರಾ? ಶೌಚಾಲಯ ಕಟ್ಟತಕ್ಕ ಸಾಮಾನ್ಯ ವ್ಯವಸ್ಥೆಯೂ ಸಹಿತ ಸರಿಯಿಲ್ಲವೆಂದರೆ ಹೇಗೆ? ಇದರ ಬಗ್ಗೆ ಸರ್ಕಾರದ ಸ್ಪಷ್ಟವಾದ ನಿಲುವನ್ನು ಮಾನ್ಯ ಸಚಿವರು ಹೇಳಬೇಕು.

ಶ್ರೀ ಬಿ.ಸತ್ಯನಾರಾಯಣ : ಮಾನ್ಯ ಅಧ್ಯಕ್ಷರೇ, ಶೌಚಾಲಯ ನಿರ್ಮಿಸಲು ನಾವು ಸಹಾಯಧನವನ್ನು ಕೊಡುತ್ತೇವೆ. People's participation ಮೇಲೆ ಇಲ್ಲಿ ಕೆಲಸವಾಗುತ್ತದೆ. ಕೆಲವು ಕಡೆ ಫಲಾನುಭವಿಗಳಿಗೆ ಅವರಿಗೇ ಅದರ ಅವಶ್ಯಕತೆ ಇಲ್ಲದೆ, ಸುಮ್ಮನೆ ಶಾಸ್ತ್ರಕ್ಕೆ ಅಧಿಕಾರಿಗಳು ಬಂದಾಗ ತೋರಿಸಿದಂತಹ ಪ್ರಸಂಗಗಳನ್ನು ನಾನೇ ನನ್ನ ಕ್ಷೇತ್ರದಲ್ಲಿ ನೋಡಿದ್ದೇನೆ. ನಮ್ಮ ಜಿಲ್ಲಾ ಪಂಚಾಯಿತಿಯ ಅಧಿಕಾರಿಗಳ ಮುಖಾಂತರ ಅಂತಹ ಕಡೆ ತನಿಖೆ ನಡೆಸಿ, ಮುಂದೆ ಆ ತರಹ ಆಗದಂತೆ ನೋಡಿಕೊಳ್ಳುವುದಕ್ಕೆ ಎಚ್ಚರ ವಹಿಸುತ್ತೇವೆ.

160 (2350) **ಶ್ರೀ ಅಶೋಕ ಗುರಪ್ಪ ಶಾಬಾದಿ (ಸಿಂಧಗಿ)** ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :-

ಅ) 2004-05ನೇ ಸಾಲಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಗ್ರಾಮೀಣಾಭಿವೃದ್ಧಿ ಇಲಾಖೆಗೆ ಒಟ್ಟು ಬಿಡುಗಡೆ ಮಾಡಿರುವ ಅನುದಾನದ ಮೊತ್ತವೆಷ್ಟು?

ಆ) ಈ ಮೊತ್ತದಿಂದ ಕೈಗೊಂಡಿರುವ ಕಾಮಗಾರಿಗಳು ಯಾವುವು (ಬಿಜಾಪುರ ಜಿಲ್ಲೆಯ ತಾಲ್ಲೂಕುವಾರು ಮಾಹಿತಿ ನೀಡುವುದು)?

ಡಾ: ಹೆಚ್.ಸಿ.ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) 2004-05ನೇ ಸಾಲಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಕ್ರಮವಾಗಿ ರೂ.435.13 ಕೋಟಿ ಮತ್ತು ರೂ.673.55 ಕೋಟಿ ಅನುದಾನ ಬಿಡುಗಡೆ ಮಾಡಿವೆ (ಒಟ್ಟು ರೂ.1108.68 ಕೋಟಿ).

ಆ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಿವಿಧ ಕಾರ್ಯಕ್ರಮಗಳಲ್ಲಿ ತೆಗೆದುಕೊಂಡ ಕಾಮಗಾರಿಗಳ ವಿವರಗಳನ್ನು ಅನುಬಂಧ-1 ರಲ್ಲಿ ಕೊಡಲಾಗಿದೆ. ಬಿಜಾಪುರ ಜಿಲ್ಲೆಯ ಕಾರ್ಯಕ್ರಮವಾರು, ತಾಲ್ಲೂಕುವಾರು ಕಾಮಗಾರಿಗಳ ಸಂಖ್ಯೆಯನ್ನು ಅನುಬಂಧ-2 ರಲ್ಲಿ ಕೊಡಲಾಗಿದೆ.

ಎಲ್.ಎ.ಕ್ಯೂ. ಸಂಖ್ಯೆ : 2350 ಕ್ಕೆ ಅನುಬಂಧ 1
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ
ಕಾರ್ಯಕ್ರಮಗಳಡಿ ತೆಗೆದುಕೊಂಡ ಕಾಮಗಾರಿಗಳ ವಿವರಗಳು

ಕ್ರ. ಸಂ.	ಯೋಜನೆಗಳು	ತೆಗೆದುಕೊಂಡ ಕಾಮಗಾರಿಗಳು
1	ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆ	ಜಲಾಯನದ ಅಭಿವೃದ್ಧಿ, ರಸ್ತೆ, ನೀರಾವರಿ ಬಾವಿಗಳು, ಅಂಗನವಾಡಿ ಕಟ್ಟಡಗಳು, ಶಾಲಾ ಕಟ್ಟಡಗಳು, ಸಾಮಾಜಿಕ ಅರಣ್ಯದಂತಹ ಆರ್ಥಿಕ ಉತ್ಪಾದನೆ ಹಾಗೂ ಸಾಮಾಜಿಕ ಲಾಭದಾಯಕ ಸ್ವತ್ತು ನಿರ್ಮಾಣ ಕಾಮಗಾರಿಗಳು
2 3 4 5	ಬರಪೀಡಿತ ಪ್ರದೇಶಾಭಿವೃದ್ಧಿ ಯೋಜನೆ ಮರುಭೂಮಿ ಅಭಿವೃದ್ಧಿ ಕಾರ್ಯಕ್ರಮ ಪಶ್ಚಿಮಘಟ್ಟ ಅಭಿವೃದ್ಧಿ ಕಾರ್ಯಕ್ರಮ ಸಮಗ್ರ ಬಂಜರು ಭೂಮಿ ಅಭಿವೃದ್ಧಿ ಕಾರ್ಯಕ್ರಮ	ಮಣ್ಣು ಮತ್ತು ನೀರು ಸಂರಕ್ಷಣೆ ಹಾಗೂ ಉತ್ಪಾದಕತೆಯನ್ನು ಹೆಚ್ಚಿಸುವ ಕಾಮಕಾರಿಗಳು
6	ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮ	ಜೈವಾನಿಲ ಸ್ಥಾವರಗಳ ನಿರ್ಮಾಣ
7	ಗ್ರಾಮ ಪಂಚಾಯತಿಗಳಿಗೆ ಅನುದಾನ	ನೀರು ಪೂರೈಕೆ, ನಿರ್ವಹಣೆ, ನೈರ್ಮಲ್ಯ, ರಸ್ತೆ ಇತ್ಯಾದಿ ಕಾಮಗಾರಿಗಳು
8 9 10	ಅಭಿವೃದ್ಧಿ ಅನುದಾನ (ಜಿ.ಪಂ.) ಅಭಿವೃದ್ಧಿ ಅನುದಾನ (ತಾ. ಪಂ.) ಹನ್ನೊಂದನೇ ಆಯೋಗದ ಶಿಫಾರಸ್ಸಿನ ಮೇರೆಗೆ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಅನುದಾನ	ಮೂಲಭೂತ ಸೌಕರ್ಯಗಳ ಕಾಮಗಾರಿಗಳು
11	ಜಿ.ಪಂ.ಕಚೇರಿ ಕಟ್ಟಗಳ ನಿರ್ಮಾಣ	ಜಿಲ್ಲಾಪಂಚಾಯಿತಿ ಕಟ್ಟಡಗಳು

ಕ್ರ. ಸಂ.	ಯೋಜನೆಗಳು	ತೆಗೆದುಕೊಂಡ ಕಾಮಗಾರಿಗಳು
12 13	ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ ರಸ್ತೆಮತ್ತು ಸೇತುವೆಗಳು 3054, 5054	ರಸ್ತೆ ಮತ್ತು ಸೇತುವೆ ನಿರ್ಮಾಣ
14	ಮುಖ್ಯಮಂತ್ರಿ ರಸ್ತೆ ಅಭಿವೃದ್ಧಿ ಯೋಜನೆ	ರಸ್ತೆ ಮತ್ತು ಸೇತುವೆಗಳ ನಿರ್ವಹಣೆ ಮತ್ತು ಅಭಿವೃದ್ಧಿ
15	ಸಣ್ಣ ನೀರಾವರಿ	ಕೆರೆ ಮತ್ತು ಕುಂಟೆಗಳ ನಿರ್ಮಾಣ ಮತ್ತು ಗಂಗಾ ಕಲ್ಯಾಣ
16 17 18	ಗ್ರಾಮೀಣ ನೀರು ಸರಬರಾಜು ಯೋಜನೆ ಎಆರ್‌ಡಬ್ಲ್ಯೂಎಸ್‌ಪಿ (ಕೇಂದ್ರ) ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ–ಗ್ರಾಮೀಣ ನೀರು ಸರಬರಾಜು ಗ್ರಾಮೀಣ ನೀರು ಸರಬರಾಜು ಯೋಜನೆ ಎನ್‌ಆರ್‌ಡಬ್ಲ್ಯೂಎಸ್‌ಪಿ (ರಾಜ್ಯ)	ನೀರು ಪೂರೈಕೆ ಯೋಜನೆಗಳು ಹಾಗೂ ಜಲಮೂಲ ರಕ್ಷಿಸಲು ನೀರು ತಡೆ ವಿನ್ಯಾಸ ಕಾಮಗಾರಿಗಳು –
19	ಸಬ್ ಮಿಷನ್ ಪ್ರಾಜೆಕ್ಟ್	ಕುಡಿಯುವ ನೀರಿನ ಗುಣಮಟ್ಟದ ಸಮಸ್ಯೆ ಇರುವ ಜನವಸತಿಗಳಿಗೆ ನೀರು ಪೂರೈಕೆ ಯೋಜನೆಗಳು
20	ಎ.ಆರ್.ಡಬ್ಲೂ.ಎಸ್.ಪಿ. – ಡಿ.ಡಿ.ಪಿ	ಜನ ಮತ್ತು ಜಾನುವಾರುಗಳಿಗೆ 70 ಎಲ್‌ಪಿಸಿಡಿ ನೀರನ್ನು ಒದಗಿಸುವ ನೀರು ಪೂರೈಕೆ ಯೋಜನೆಗಳು (ಆಯ್ಕೆಯಾದ ಜಿಲ್ಲೆಗಳಲ್ಲಿ ಮಾತ್ರ)
21	ಸ್ವಜಲಧಾರಾ	ವಂತಿಗೆ ಆಧಾರಿತ ಕುಡಿಯುವ ನೀರು ಪೂರೈಕೆ ಯೋಜನೆ
22	ಗ್ರಾಮೀಣ ನೈರ್ಮಲ್ಯ (ರಾಜ್ಯ)	ಶೌಚಾಲಯಗಳು
23	ಸ್ವಚ್ಛ ಗ್ರಾಮ ಯೋಜನೆ	ಒಳರಸ್ತೆ ಮತ್ತು ಚರಂಡಿ ನಿರ್ಮಾಣ, ಶೌಚಾಲಯಗಳು,ಸುಧಾರಿತ ಒಲೆಗಳು ಮತ್ತು ಸಾಮೂಹಿಕ ತಿಪ್ಪೆಗುಂಡಿಗಳ ನಿರ್ಮಾಣ ಕಾಮಗಾರಿಗಳು

ಕ್ರ. ಸಂ.	ಯೋಜನೆಗಳು	ತೆಗೆದುಕೊಂಡ ಕಾಮಗಾರಿಗಳು
24	ವಿದೇಶಿ ನೆರವಿನ ಯೋಜನೆಗಳು: ಅ) ವಿಶ್ವಬ್ಯಾಂಕ್ ಯೋಜನೆ– 2ನೇ ಹಂತ (ಜಲ ನಿರ್ಮಲ) ಆ) ಡ್ಯಾನಿಡಾ ನೆರವಿನ ಯೋಜನೆ	ಕುಡಿಯುವ ನೀರು ಮತ್ತು ನೈರ್ಮಲ್ಯ ಕಾಮಗಾರಿಗಳು

ಶ್ರೀ ಅಶೋಕ ಗುರಪ್ಪ ಶಾಬಾದಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಆದರೆ ಬಿಜಾಪುರ ಜಿಲ್ಲೆಗೆ ಎಷ್ಟು ಅನುದಾನ ಬಿಡುಗಡೆ ಆಗಿದೆ? ಅನ್ನತಕ್ಕಂಥ ಹಣದ ಅಂಕಿ ಅಂಶವನ್ನು ಅವರು ಒದಗಿಸಿಲ್ಲ. ಅದರ ಜೊತೆಗೆ ನಮ್ಮ ಸಿಂಧಗಿ ತಾಲ್ಲೂಕಿಗೆ ಎಷ್ಟು ಅನುದಾನ ಅದರಲ್ಲಿ ಬಿಡುಗಡೆಯಾಗಿದೆ ಅನ್ನತಕ್ಕಂಥ ಅಂಕಿ ಅಂಶಗಳನ್ನೂ ಸಹ ಒದಗಿಸಿರುವುದಿಲ್ಲ. ಕೇವಲ ಕಾಮಗಾರಿಗಳ ಸಂಖ್ಯೆಯನ್ನು ಮಾತ್ರ ಒದಗಿಸಿದ್ದಾರೆ. ಇದರಿಂದ ಸಂಪೂರ್ಣವಾಗಿ ಜಿಲ್ಲೆಯ ಮತ್ತು ತಾಲ್ಲೂಕಿನ ಕಾಮಗಾರಿಗಳು ಮತ್ತು ಅದಕ್ಕೆ ಬಿಡುಗಡೆಯಾಗಿರತಕ್ಕಂಥ ಹಣದ ಬಗ್ಗೆ ನನಗೆ ಸಿಗಬೇಕಾದಂತಹ ಮಾಹಿತಿ ಸಂಪೂರ್ಣವಾಗಿ ದೊರಕಿಲ್ಲ. ಇದರ ಜೊತೆಗೆ ನಮ್ಮ ತಾಲ್ಲೂಕಿನಲ್ಲಿ ಸುಮಾರು 27 ಲಂಬಾಣಿ ತಾಂಡಾಗಳು ಬರುತ್ತವೆ. ಸಮಗ್ರ ತಾಂಡಾ ಅಭಿವೃದ್ಧಿ ಯೋಜನೆಯಲ್ಲಿ 23 ತಾಂಡಾದ ಜನ, ಈ ಯೋಜನೆಯಲ್ಲಿ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು ಅನ್ನತಕ್ಕಂಥ ಅರ್ಜಿಯನ್ನೂ ಸಹ ಕೊಟ್ಟು ಬಹಳ ದಿವಸಗಳಾಯಿತು. ಈ ಸಮಗ್ರ ತಾಂಡಾ ಅಭಿವೃದ್ಧಿ ಯೋಜನೆಯಲ್ಲಿ ಯಾವುದೇ ಮಂಜೂರಾತಿ ದೊರೆತ ಬಗ್ಗೆ ಈ ಒಂದು ವಿವರಣೆಯಲ್ಲಿ ಇಲ್ಲ, ಆದಕಾರಣ ಮಾನ್ಯ ಸಚಿವರು ಈ ಪ್ರತಿಯೊಂದು ಕಾಮಗಾರಿಗೆ ಎಷ್ಟೆಷ್ಟು ಹಣ ಬಿಡುಗಡೆಯಾಗಿದೆ? ನಮ್ಮ ತಾಲ್ಲೂಕಿಗೆ ಎಷ್ಟು ಬಿಡುಗಡೆಯಾಗಿದೆ? ತಾಲ್ಲೂಕಿನ ಪ್ರತಿಯೊಂದ ಕಾಮಗಾರಿಗೆ ಎಷ್ಟು ಬಿಡುಗಡೆಯಾಗಿದೆ? ಸಮಗ್ರ ಜಿಲ್ಲೆಗೆ ಎಷ್ಟು ಹಣ ಬಿಡುಗಡೆಯಾಗಿದೆ? ಅನ್ನತಕ್ಕಂಥ ವಿವರಗಳನ್ನು ನೀಡಬೇಕು. ಸಮಗ್ರ ತಾಂಡಾ ಅಭಿವೃದ್ಧಿ ಯೋಜನೆಯನ್ನು ಏಕೆ ಕೈಗೆತ್ತಿಕೊಳ್ಳಲಾಗಿಲ್ಲ ಎಂಬುದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕು. ಇದರ ಜೊತೆಗೆ ಸುಮಾರು 3–4 ವರ್ಷಗಳಿಂದ ಸ್ವಚ್ಛ ಗ್ರಾಮ ಯೋಜನೆಯಲ್ಲಿ 2001ನೇ ಇಸವಿಯಿಂದ ಆರಂಭವಾದಂತಹ

ಸ್ವಚ್ಛ ಗ್ರಾಮ ಯೋಜನೆಯ ಕಾಮಗಾರಿಗಳು ಇನ್ನೂವರೆಗೆ ಪೂರ್ತಿಯಾಗಿಲ್ಲ. ಬಹಳಷ್ಟು ಕಡೆ ಕಳಪೆ ಕಾಮಗಾರಿಗಳೇ ಆಗಿವೆ. ಕೆಲವೊಂದು ಕಡೆ ಚರಂಡಿಗಳನ್ನು ಮಾತ್ರ ನಿರ್ಮಿಸಿದ್ದಾರೆ. ರಸ್ತೆಗಳ ನಿರ್ಮಾಣ ಮಾಡಿಲ್ಲ, ಕುಡಿಯುವ ನೀರಿನ ಮತ್ತು ನೈರ್ಮಲ್ಯೀಕರಣದಕೆಲಸ ಕಾರ್ಯಗಳೂಕೂಡ ಆಗಿಲ್ಲ. ನಮ್ಮ ತಾಲ್ಲೂಕಿನಲ್ಲಿ 2001ನೇ ಇಸವಿಯಲ್ಲಿ 41 ಕಾಮಗಾರಿಗಳನ್ನು ತೆಗೆದುಕೊಂಡರೂ ಕೂಡ, 4–5 ಕಡೆ ಬಿಟ್ಟರೆ ಎಲ್ಲಾ ಕಡೆಯೂ ಕೂಡ ಅವ್ಯವಸ್ಥೆಯಾಗಿದೆ. ಸ್ವಚ್ಛ ಗ್ರಾಮಗಳು ಆಗಬೇಕಾಗಿತ್ತು, ಆದರೆ ಬಹಳಷ್ಟು ಕಡೆ ಅವು ಹೊಲಸು ಗ್ರಾಮಗಳಾಗಿವೆ ಅನ್ನತಕ್ಕಂಥ ಮಾತುಗಳು ನನ್ನ ಮತಕ್ಷೇತ್ರದಾದ್ಯಂತ ಮತ್ತು ತಾಲ್ಲೂಕಿನಾದ್ಯಂತ ಕೇಳಿ ಬರುತ್ತಿವೆ. ಇದರ ಬಗ್ಗೆ ಸಮಗ್ರ ತನಿಖೆ ಮಾಡಬೇಕು ಮತ್ತು ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಬೇಕು. ಯಾವ ಕಾರಣದಿಂದ ಈ ಕಾಮಗಾರಿಗಳು ಈ ರೀತಿಯಾಗಿವೆ ಮತ್ತು ಅಪೂರ್ಣಗೊಂಡಿವೆ ಎಂಬುದರ ಬಗ್ಗೆ ಉತ್ತರವನ್ನು ನೀಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಡಾ: ಹೆಚ್.ಸಿ.ಮಹದೇವಪ್ಪ : ಸನ್ಮಾನ್ಯ ಸಭಾಧ್ಯಕ್ಷರೇ, ಬಿಜಾಪುರ ಜಿಲ್ಲೆಯಲ್ಲಿ ಆಗಿರುವ ಕಾಮಗಾರಿಗಳ ಬಗ್ಗೆ ಮಾನ್ಯ ಸದಸ್ಯರು ಕೇಳಿದ್ದಾರೆ. ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆಯಲ್ಲಿ ಬಿಜಾಪುರದಲ್ಲಿ 1077 ಬಾಗೇವಾಡಿ 627, ಮುದ್ದೇಬಿಹಾಳ್ 714, ಇಂಡಿ 1032, ಸಿಂಧಗಿ 1156, ಕಾಮಗಾರಿಗಳನ್ನು ತೆಗೆದುಕೊಂಡಿದ್ದೇವೆ. ಮರುಭೂಮಿ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಬಿಜಾಪುರದಲ್ಲಿ 59, ಬಾಗೇವಾಡಿಯಲ್ಲಿ 27, ಮುದ್ದೇಬಿಹಾಳ್‌ದಲ್ಲಿ 6, ಇಂಡಿಯಲ್ಲಿ 62 ಮತ್ತು ಸಿಂಧಗಿಯಲ್ಲಿ 102 ಕಾಮಗಾರಿಗಳನ್ನು ತೆಗೆದುಕೊಂಡಿದ್ದೇವೆ. ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಬಿಜಾಪುರದಲ್ಲಿ 10, ಬಾಗೇವಾಡಿಯಲ್ಲಿ 10, ಮುದ್ದೇಬಿಹಾಳ್‌ನಲ್ಲಿ 10, ಇಂಡಿಯಲ್ಲಿ 10 ಮತ್ತು ಸಿಂಧಗಿಯಲ್ಲಿ 10 ಕಾಮಗಾರಿಗಳನ್ನು ತೆಗೆದುಕೊಂಡಿದ್ದೇವೆ. ಗ್ರಾಮ ಪಂಚಾಯಿತಿಗಳ ಅನುದಾನ ಬಿಜಾಪುರ 577, ಬಾಗೇವಾಡಿ 638, ಮುದ್ದೇಬಿಹಾಳ್ 578, ಇಂಡಿ 636 ಮತ್ತು ಸಿಂಧಗಿ 565. ಅಭಿವೃದ್ಧಿ ಅನುದಾನ (ಜಿಲ್ಲಾ ಪಂಚಾಯಿತಿ: ತಾಲ್ಲೂಕು ಪಂಚಾಯಿತಿ) ದಲ್ಲಿ ಬಿಜಾಪುರ 6, ಬಾಗೇವಾಡಿ 7, ಮುದ್ದೇಬಿಹಾಳ್ 2, ಇಂಡಿ 2 ಮತ್ತು ಸಿಂಧಗಿ 4. ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಲ್ಲಿ ಬಿಜಾಪುರ 2, ಬಾಗೇವಾಡಿ 1, ಮುದ್ದೇಬಿಹಾಳ್ 2, ಇಂಡಿ 1 ಮತ್ತು ಸಿಂಧಗಿ 1. ರಸ್ತೆ ಮತ್ತು ಸೇತುವೆಗಳು 3054 ಮತ್ತು 5054 ರಲ್ಲಿ 14

ಸಿಂಧಗಿ ಉಳಿದಿದ್ದೆಲ್ಲವನ್ನು ಬೇರೆ ತಾಲ್ಲೂಕುಗಳಲ್ಲಿ ತೆಗೆದುಕೊಂಡಿದ್ದಾರೆ. ಮುಖ್ಯಮಂತ್ರಿಗಳ ರಸ್ತೆ ಅಭಿವೃದ್ಧಿಯಲ್ಲಿ ಸಿಂಧಗಿಯಲ್ಲಿ 17 ತೆಗೆದುಕೊಂಡಿದ್ದಾರೆ. ಸಣ್ಣ ನೀರಾವರಿಯಲ್ಲಿ 3, ಗ್ರಾಮೀಣ ನೀರು ಸರಬರಾಜು ಯೋಜನೆ ಎ.ಆರ್.ಡಬ್ಲ್ಯೂ.ಎಸ್. (ಕೇಂದ್ರ)ದಲ್ಲಿ 13, ಸಬ್ ಮಿಷನ್ ಪ್ರಾಜೆಕ್ಟ್ ಇಲ್ಲ, ಗ್ರಾಮೀಣ ನೀರು ಸರಬರಾಜುಯೋಜನೆ ಎನ್.ಆರ್.ಡಬ್ಲ್ಯೂ.ಎಸ್. (ರಾಜ್ಯ)ದಲ್ಲಿ 5, ಹೀಗೆ ಸುಮಾರು 1920 ಕಾಮಗಾರಿಗಳನ್ನು ಅವರ ಸಿಂಧಗಿ ತಾಲ್ಲೂಕಿನಲ್ಲಿ ತೆಗೆದುಕೊಂಡಿದ್ದಾರೆ. ಒಟ್ಟು ಬಿಜಾಪುರದಲ್ಲಿ 1754, ಬಾಗೇವಾಡಿಯಲ್ಲಿ 1730, ಮುದ್ದೇಬಿಹಾಳ್‌ನಲ್ಲಿ 1376, ಇಂಡಿಯಲ್ಲಿ 1831 ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ. ಯಾವ ಕಾರಣಕ್ಕಾಗಿ ಎಷ್ಟು ತೆಗೆದುಕೊಂಡಿದ್ದಾರೆ? ಕೆಲವು ಕಡೆ ಸರಿಯಾಗಿ ಏಕೆ ಆಗಿಲ್ಲ? ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಸಂಪೂರ್ಣವಾದಂತಹ ಮಾಹಿತಿಯನ್ನು ಮಾನ್ಯ ಸದಸ್ಯರು ಈ ಬಗ್ಗೆ ಕೊಟ್ಟರೆ, ಅದರ ಬಗ್ಗೆ ತನಿಖೆ ಮಾಡಿಸುತ್ತೇನೆ. ಕಾಮಗಾರಿಗಳು ಏಕೆ ಆಗಿಲ್ಲ? ಯಾರು ಅದನ್ನು ಮಾಡಿದರು? ಮುಂತಾದ ವಿಚಾರಗಳ ಬಗ್ಗೆ ತನಿಖೆ ಮಾಡಿಸಿ ನಾನು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಅವರು ಆ ಕ್ಷೇತ್ರಕ್ಕೆ ಸಂಬಂಧಪಟ್ಟವರು. ತಾವೆಲ್ಲಾ ಇಂಟರ್‌ಫೀಯರ್ ಆಗಬಾರದು. ಈ ರೀತಿ ಹೋದರೆ ಇಡೀ ದಿನ ಪ್ರಶ್ನೋತ್ತರ ನಡೆಸಬೇಕೆಂದು ತೀರ್ಮಾನ ಆದರೆ ನಾನು ಪ್ರಶ್ನೋತ್ತರವನ್ನೇ ನಡೆಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಕೇಂದ್ರ ಸರ್ಕಾರದಿಂದ ಬೇರೆ ಬೇರೆ ಕಡೆಯಿಂದ ಹಣ ಬರುತ್ತದೆ. ಅದನ್ನು ಅವರು ಖರ್ಚು ಮಾಡುವುದಿಲ್ಲ. ಲೋಕಸಭೆಯಲ್ಲಿ ಕೇಳಿದರು, ಬರುವ 38 ಕೋಟಿ ರೂಪಾಯಿ ಕಳೆದುಕೊಳ್ಳುತ್ತಿದ್ದಾರೆ.

ಅಧ್ಯಕ್ಷರು : ಅದು ಬೇರೆ ವಿಚಾರ. ಬೇರೆ ರಿತಿಯಲ್ಲಿ ಪ್ರಶ್ನೆ ತನ್ನಿ.

ಶ್ರೀ ಜಗದೀಶ್ ಶೆಟ್ಟರ್ : ಪ್ರಶ್ನೆ ಮಾಡುತ್ತಿಲ್ಲ. ಬಂದಿದ್ದ ಹಣವನ್ನೂ ಕೂಡ ಖರ್ಚು ಮಾಡಲಿಲ್ಲ. ಬಂದಂತಹ ಹಣ ವಾಪಸ್ ಹೋಗುತ್ತಿದೆ.

161 (2078) **ಶ್ರೀ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ)** ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :--